ಇಲ್ಲೆ ಚಿಂತನ ಲೇಔಟಿನಲ್ಲಿ ಸ್ವಂತ ಮನೇಲಿದೀನಿ' ಅಂದರು. ಇಬ್ಬರ ನಾಯಿಗಳು ಪರಸ್ಪರ ಮೂಸುತ್ತ, ಪರಿಚಯ ಮಾಡಿಕೊಂಡು ಅತ್ತಿತ್ತ ನೆಲ ಮೂಸಿ ಪರೀಕ್ಷೆ ಮಾಡುತ್ತ ನಿಲ್ಲಿಸಿದ್ದ ಕಾರುಗಳ ಗಾಲಿಗೆ ಮೂತ್ರ ಹಾರಿಸುತ್ತ ಇದ್ದವು. ಅಲ್ಲೆ ಒಂದುಕಡೆ ಮತ್ತೊಂದನ್ನು ವಿಸರ್ಜಿಸಿದವು. ಇದು ವಾಕಿಂಗಿನ ಒಂದು ಮುಖ್ಯ ಕರ್ತವ್ಯವೆ ಆಗಿತ್ತು.

'ವಸಂತ ಹೇಳತಿದ್ದ, ಅಮೆರಿಕದಲ್ಲಿ ಒಂದು ಚೀಲ ಒಂದು ಶವೆಲ್ ಜೊತೇಲಿ ಇಟ್ಕೋತಾರಂತೆ. ಮಾಡಿದ ಕೂಡ್ಲೆ ತೆಗೆದು ಚೀಲಕ್ಕೆ ಹಾಕ್ಕೊಳಬೇಕಂತೆ. ತಪ್ಪಿದರೆ ಸಮಾ ದಂಡ ಬೀಳತ್ತಂತೆ' ದೀನಪ್ರಸಾದ್ ನಾಯಿಯನ್ನು ನೋಡುತ್ತ ಹೇಳಿದರು.

'ಇಲ್ಲಿ ಮನುಷ್ಯರ ಬಯಲು ಶೌಚ ಬಿಡಿಸೋ ಶ್ರಮ ಈಗ ನಡೀತಿದೆ. ನಾಯಿಗಿನ್ನೂ ರೂಲು ಬರಬೇಕು...' ನಕ್ಕವರು, 'ಮಗ ಅಮೆರಿಕದಲ್ಲೇನು ಮಾಡತಾನೆ?' ಕೇಳಿದರು.

'ವಸಂತ ಎಂ.ಟೆಕ್. ಮಾಡಿಕೊಂಡಿದಾನೆ. ಅಮೆರಿಕದ ಎಮ್ಮೆನ್ಸಿ ಕಂಪನೀಲಿ ಕೆಲಸ ಸಿಕ್ಕು ಅಲ್ಲೆ ಸೆಟ್ಲಾಗಿದಾನೆ. ಮಗಳು ಡಾಕ್ಟರು. ನನ್ನ ಲೈನಿಗೆ ಯಾರು ಬರಲಿಲ್ಲ.'

'ಬಿಡಿ, ಅಲ್ಲವರಿಗೆ ಭವಿಷ್ಯ ಇದೆ. ಈ ಇತಿಹಾಸ, ಭೂಗೋಲದ ಕಂತೆಯೆಲ್ಲ ಈಗ ಯಾರಿಗೆ ಬೇಕು? ಬ್ರಿಟಿಷರು ಯಾವಾಗ ಭಾರತಕ್ಕೆ ಬಂದ್ರು... ಹುಮಾಯೂನ ಯಾವ ಇಸವಿಯಲ್ಲಿ ಸತ್ತ... ಕಟ್ಟಿಕೊಂಡು ಏನಾಗಬೇಕು? ಯಾವಾಗ ಸತ್ರು ಏನು ವ್ಯತ್ಯಾಸವಾಗೋದು?'

ಈತ ತನಗೆ ಚುಚ್ಚುತ್ತಿದಾನ ಅನಿಸಿ ಅವರ ಮುಖ ನೋಡಿದರು. ತಾನು ಇತಿಹಾಸ ವಿಭಾಗದ ಎಚ್‌ಓಡಿ ಆಗಿ ನಿವೃತ್ತನಾದವನು ಅನ್ನುವ ಸ್ವಾಭಿಮಾನ ಎಚ್ಚತ್ತಿತು.

'ಹಾಗನ್ಬೇಡಿ... ಈ ಕ್ಷಣದ ಘಟನೆಗಳೇ ನಾಳಿನ ಇತಿಹಾಸ. ನಾಳೆ ಕಾಣಿಸೋ ಪರಿಣಾಮದ ಹಿನ್ನೆಲೆಯಲ್ಲಿ ನಾವೇನು ತಪ್ಪು ಮಾಡಿದ್ವಿ ಅನ್ನೋದನ್ನ ಅದು ಹೇಳುತ್ತೆ. ನಮ್ಮನ್ನ ತಿದ್ದುತ್ತೆ. ನನ್ನ ಸರ್ವೀಸಿನಲ್ಲಿ ನೂರಾರು ವಿದ್ಯಾರ್ಥಿಗಳು ಎಂ.ಎ. ಪಾಸಾಗಿದಾರೆ. ಕಡಮೆ ಅಂದ್ರು ಇಪ್ಪತ್ತು ಜನರಿಗಾದ್ರು ಗೈಡಾಗಿದ್ದೆ. ಅವರೆಲ್ಲ ಈಗ ಪಿಎಚ್.ಡಿ. ಪಡೆದು ಎಲ್ಲೆಲ್ಲೊ ಇದಾರೆ... ಕೆಲವರು ಐಎಎಸ್, ಅಸಿಸ್ಟಂಟ್ ಕಮಿಶನರೂ ಆಗಿದಾರೆ' ತಹಶೀಲ್ದಾರರು ಅಂತಹವರ ಕೆಳಗೆ ಕೆಲಸ ಮಾಡಬೇಕು ಅಂತ ಪ್ರತಿಯಾಗಿ ತಾನು ಚುಚ್ಚಿದೆ ಅಂತ ತೃಪ್ತಿಯಾಯಿತು.

ಮನೆಗೆ ಹೋದವರು ತಿಂಡಿ ತಿನ್ನುವಾಗ ಡಾನ್ ತಳಿ ಯಾವುದು ಅಂತ ಹೆಂಡತಿಯನ್ನು ಕೇಳಿದರು. 'ಅಯ್ಯ! ಗೋಲ್ಡನ್ ರಿಟ್ರೈವರ್ ಅವನು. ಮನುಷ್ಯಸ್ನೇಹಿ ಜಾತಿ. ಇಷ್ಟುದಿನ ಗೊತ್ತೇ ಇರಲಿಲ್ವೇನ್ರಿ?'

'ಗೊತ್ತಿತ್ತೇ... ಆ ತಾಶೀಲ್ದಾರ ಜಯರಾಮಯ್ಯ ಏನೇನೊ ಹೇಳಕ್ಕೆ ಬಂದ. ಅವನೂ ಒಂದು ನಾಯಿ ತಂದಿದ್ದ. ಥೇಟು ಕುರಿ ತರಾ ಕಾಣತಿತ್ತು ನೋಡು' ಹೆಂಡತಿಯ ಮಿದುಳಿಗೆ ಕೆಲಸ ಕೊಟ್ಟೆ ಅಂದುಕೊಂಡರು.

'ಥೋ... ಅದು ಕುರಿಯಲ್ಲ. ಪೂಡ್ಲ್ ಡಾಗ್ ಅಂತಾರೆ ಅದಕ್ಕೆ!'

ಹೆಂಡತಿಯ ಜ್ಞಾನಸಮೃದ್ಧಿಗೆ ಅಸೂಯೆಯಾಯಿತು. ತಮ್ಮ ಸಂಗ್ರಹದಲ್ಲಿದ್ದ ಪುಸ್ತಕಗಳಲ್ಲಿ ಹುಡುಕಿ ಜಾಲಾಡಿದರು. ಅಬ್ಬಾ ನಾಯಿಗಳಲ್ಲೂ ಎಷ್ಟೊಂದು ಜಾತಿಗಳು! ಅವುಗಳ ಗುಣ ವರ್ತನೆಗಳನ್ನೂ ಅಭ್ಯಾಸ ಮಾಡಿದಾರಲ್ಲ ಅಂತ ಬೆರಗಾಯಿತು. ಜಯರಾಮಯ್ಯ ಮತ್ತು ದೀನಪ್ರಸಾದ್ ನಿತ್ಯ ಜೋಡಿಯಲ್ಲಿ ಉಲೂಪಿ ಕೆರೆಯವರೆಗೆ ಹೋಗುವುದು ಮಾಮೂಲಿಯಾಗಿತ್ತು. ಇದ್ದಕ್ಕಿದ್ದಂತೆ ಕೆಲ ಸಂಗತಿಗಳು ಪ್ರತಿಷ್ಠೆಯದಾಗಿ ಚರ್ಚೆ ತಾರಕಕ್ಕೇರಿದಾಗ ಎಲ್ಲಿ ಬೇಕಾದರೂ ನಿಂತು ಮತ್ತೆ ಮುಂದುವರಿಯುತ್ತಿದ್ದರು. ಕೆರೆಯ ಹತ್ತಿರ ಬೇರೆಬೇರೆ ಕಡೆಯಿಂದ ವಾಕಿಂಗ್ ಬರುವವರು ಸೇರಿ ದಟ್ಟಣೆಯಿರುತ್ತಿತ್ತು. ತಾಜಾ ಹಸಿರು ಸೊಪ್ಪುಗಳ ರಸವನ್ನು ಡಯಾಬಿಟಿಸಿಗೆ, ರಕ್ತದೊತ್ತಡಕ್ಕೆ ರಾಮಬಾಣ ಅಂತ ಮಾರುವವರು, ತರಕಾರಿಯವರು, ಹೂವಿನವರು ಅಲ್ಲಿ ಆ ಹೊತ್ತಲ್ಲಿ